<u>**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**</u>

**ಎಫ್ ಡಿ ಪಿ . 08/2013 ಆರ್. ಡಬ್ಲು: 1**

**ದಿನಾಂಕ: 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>**ಪಾಟೀ ಸವಾಲು: 1 ಮತ್ತು 2 ನೇ ಎದುರುದಾರರ ಪರ ಶ್ರೀ. ಸಿ ಆರ್ ಬಿ ವಕೀಲರಿಂದ:**</u>

OS No.91/2012 ಎಂಬ ದಾವೆಯನ್ನು 2 ನೇ ಎದುರುದಾರರು ನನ್ನ ವಿರುದ್ದ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿ ಆಗಿದ್ದೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ನನ್ನ ಅಣ್ಣನ ಮಗ. ಸದರಿ ದಾವೆಯಲ್ಲಿ 2 ನೇ ಎದುರುದಾರರು ನನ್ನ ಮತ್ತು ಇತರರ ವಿರುದ್ದ 4 ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಸಹ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಹೇಳಿದ ಸಾಕ್ಷಿಯನ್ನು ನಿ.ಆರ್.3 ಆಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಸಹ OS NO.91/2012 ಎಂಬ ದಾವೆಯನ್ನು 2 ನೇ ಎದುರುದಾರರು ನನ್ನ ಮೇಲೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ಬರೆಸಿದರು ಎಂದು ನನಗೆ ಗೊತ್ತಿಲ್ಲ. ಸದರಿ OS NO.91/2012 ರಲ್ಲಿ ನಾಲ್ಕು ಆಸ್ತಿಗಳು ಕೋಳೇನಳ್ಳಿ ಗ್ರಾಮದ ಸ.ನಂ.48/2, 34/3, 29/1 ಮತ್ತು 61/1 ಆಸ್ತಿಗಳು ಸೇರಿದ್ದವು ಎಂದರೆ ನನಗೆ ಗೊತ್ತಿಲ್ಲ.

ಸದರಿ ದಾವೆಯಲ್ಲಿ ನನ್ನ ಮತ್ತು 2 ನೇ ಎದುರುದಾರರ ವಿಚಾರಣೆ ಆಗಿರುತ್ತದೆ ಅದರ ಮೇರೆಗೆ ಆದೇಶ ಸಹ ಆಗಿರುತ್ತದೆ ಎಂದರೆ ಸುಳ್ಳು. ಸದರಿ ದಾವೆಯಲ್ಲಿ ಸ.ನಂ.29/1 ರ ಬಾಬ್ತು ಸಹ ನಾನು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಗೋವಿಂದಯ್ಯ 4 ನೇ ಪ್ರತಿವಾದಿಯಾಗಿ ಇದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಸ.ನಂ.29/1 ಅನ್ನು ಗೋವಿಂದಯ್ಯ ನನಗೆ ಮಾರಾಟ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಸ.ನಂ.29/1 ನಾನು ಕೊಂಡಿರುವ ಆಸ್ತಿ ಎಂದು ಸದರಿ ದಾವೆಯಲ್ಲಿ ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಗೋವಿಂದಯ್ಯರವರಿಗೆ ಸ.ನಂ.29/1 ಅನ್ನು ಮಾರಾಟ ಮಾಡುವ ಹಕ್ಕು ಅಥವಾ ಅಧಿಕಾರ ಇರಲಿಲ್ಲ ಎಂದು ತೀರ್ಮಾನವಾಯಿತು ಎಂದರೆ ಸರಿಯಲ್ಲ. ಸದರಿ ದಾವೆಯ ಆದೇಶದ ಮೇಲೆ 2 ನೇ ಎದುರುದಾರರು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ.

ಸದರಿ ಆರ್ಜಿಯಲ್ಲಿ ಸ.ನಂ.29/1 ಷಡ್ಯೂಲ್ ಐಟಂ ನಂ.2 ಎಂದರೆ ಸರಿಯಲ್ಲ. ಸ.ನಂ.29/1 ರಲ್ಲಿ ನನಗೆ ಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.34/3 ರ ವಿಸ್ತೀರ್ಣ 3 ಎಕರೆ 17 ಗುಂಟೆ ಎಂದರೆ ಸರಿ. ಸದರಿ ಸ.ನಂ.34/3 ರಲ್ಲಿ ನನ್ನ ತಂದೆ ತಿರುಮಲಯ್ಯರವರಿಗೆ 2 ಎಕರೆ 2 ಗುಂಟೆ ಜಮೀನು ಅವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಸ.ನಂ.34/3 ಅನ್ನು ಉಳಿದ 1 ಎಕರೆ 15 ಗುಂಟೆ ನರಸಪ್ಪ ರವರ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 15 ಗುಂಟೆ ಜಮೀನು ನರಸಪ್ಪ ರವರ ಮಗಳ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂ.34/3 ರ ತಿರುಮಲಯ್ಯ ರವರ 2 ಎಕರೆ 2 ಗುಂಟೆ ಭಾಗ ನನಗೂ ಮತ್ತು ಮುನಿವೆಂಕಟಯ್ಯರವರಿಗೆ ತಲಾ ಅರ್ಧ ಭಾಗ ಬಂದಿರುತ್ತದೆ ಎಂದರೆ ಸುಳ್ಳು. ನನಗೂ ನನ್ನ ಅಣ್ಣ ಮುನಿವೆಂಕಟಯ್ಯನಿಗೂ ವಿಭಾಗದಲ್ಲಿ ಸ.ನಂ.34/3 ರಲ್ಲಿ ತಲಾ 1 ಎಕರೆ 1 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂ.33 ಮತ್ತು 34 ರಲ್ಲಿ ನನಗೂ ಮತ್ತು ಮುನಿವೆಂಕಟಯ್ಯನಿಗೂ ಅರ್ಧ ಭಾಗ ಬಂದಿರುತ್ತದೆ ಎನ್ನುತ್ತಾರೆ. ಸದರಿ ಸ.ನಂ.34/3 ರಲ್ಲಿ ನನ್ನ ಭಾಗಕ್ಕೆ 1 ಎಕರೆ 1 ಗುಂಟೆ ಎಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂ.34/3 ರಲ್ಲಿ 1 ಎಕರೆ 28 1/2 ಗುಂಟೆ ನನ್ನ ಹೆಸರಿಗೆ ಕಂದಾಯ ಇಲಾಖೆ ಅಧಿಕಾರಿಗಳ ಜೊತೆ ಶಾಮೀಲು ಆಗಿ ಬದಲಾಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸ.ನಂ.34/3 ರ 1 ಎಕರೆ 1 ಗುಂಟೆ ಜಮೀನಿನಲ್ಲಿ ನಾನು ಈಗಲೂ ಸಹ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ಸ.ನಂ.34/2 ರಲ್ಲಿ ನನಗೆ ಯಾವುದೇ ಹಕ್ಕು ಭಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.34/3 ಮಾತ್ರ ನನ್ನ ತಂದೆಯ ಆಸ್ತಿ ಆಗಿದ್ದು, ಸ.ನಂ.34/2 ರಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.34/2 ರ ಮೇಲೆ ನನಗೆ ಹಕ್ಕು ಇದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ಸ.ನಂ.34/2 ಮುನಿವೆಂಕಟಯ್ಯ ನವರ ಮಕ್ಕಳಿಗೆ ಸೇರಿದ್ದು ಎಂದರೆ ಸರಿ.

ಈ ಅರ್ಜಿಯಲ್ಲಿ ಇರುವ ಆಸ್ತಿಗಳ ಮೇಲೆ ನನಗೆ ಹಕ್ಕಿಲ್ಲದಿದ್ದರೂ ನಾನು ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್.34 ರಿಂದ 38 ದಾಖಲಾತಿಗಳನ್ನು OS No.91/2012 ರಲ್ಲಿ ಸಹ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದರಂತೆ OS No.91/2012 ರಲ್ಲಿ ಸದರಿ ದಾಖಲಾತಿಗಳನ್ನು ನ್ಯಾಯಾಲಯ ವಿಮರ್ಶಿಸಿ ಸ.ನಂ.29/1 ರ

ಮಾಲೀಕತ್ವ ನನಗಿಲ್ಲ ಎಂದು ತೀರ್ಮಾನಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಉಳಿದ ಪಕ್ಷಕಾರರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ. ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಗುಬ್ಬಿ.**